## ಪ್ರಾರ್ಥನೆ

# ಶ್ರೀರಾಮಸ್ತುತಿ



**ಮಾಯಾತೀತಂ ಮಾಧವಮಾದ್ಯಂ ಜಗದಾದಿಂ**
**ಮಾನಾತೀತಂ ಮೋಹವಿನಾಶಂ ಮುನಿವಂದ್ಯಮ್ ।**
**ಯೋಗಿಧ್ಯೇಯಂ ಯೋಗವಿಧಾನಂ ಪರಿಪೂರ್ಣಂ**
**ವಂದೇ ರಾಮಂ ರಂಜಿತಲೋಕಂ ರಮಣೀಯಮ್ ॥ ೧ ॥**

ಮಾಯಾತೀತನೂ, ಮಾಧವನೂ, ಎಲ್ಲರ ಆದ್ಯನೂ, ಜಗತ್ಕಾರಣನೂ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ನಿಲುಕದವನೂ, ಮೋಹವನ್ನು ಕಳೆಯುವವನೂ, ಮುನಿಜನರಿಂದ ನಮಸ್ಕರಿಸಲ್ಪಟ್ಟವನೂ, ಯೋಗಿಗಳಿಂದ ಧ್ಯಾನಿಸಲ್ಪಡುವವನೂ, ಯೋಗಮಾರ್ಗದ ಪ್ರವರ್ತಕನೂ, ಪರಿಪೂರ್ಣನೂ, ಲೋಕಗಳನ್ನು ರಂಜಿಸುವ ಪರಮ ಸುಂದರನೂ ಆದ ಶ್ರೀರಾಮನನ್ನು ವಂದಿಸುತ್ತೇನೆ.

**ಭಾವಾಭಾವಪ್ರತ್ಯಯಹೀನಂ ಭವಮುಖ್ಯೈ-**
**ರ್ಯೋಗಾಸಕ್ತೈರರ್ಚಿತಪಾದಾಂಬುಜಯುಗ್ಮಮ್ ।**
**ನಿತ್ಯಂ ಶುದ್ಧಂ ಬುದ್ಧಮನಂತಂ ಪ್ರಣವಾಖ್ಯಂ**
**ವಂದೇ ರಾಮಂ ವೀರಮಶೇಷಾಸುರದಾವಮ್ ॥ ೨ ॥**

ಇದೆ, ಇಲ್ಲ ಎಂಬ ಪ್ರತ್ಯಯಗಳನ್ನು ಮೀರಿದವನಾದ (ಶಾಶ್ವತನಾದ), ಯೋಗಾಸಕ್ತರಾದ ಪರಮೇಶ್ವರನೇ ಮುಂತಾದವರಿಂದ ಪೂಜಿಸಲ್ಪಟ್ಟ ಪಾದದ್ವಯಗಳುಳ್ಳ, ನಿತ್ಯನೂ, ಶುದ್ಧನೂ ಬುದ್ಧನೂ, ಅನಂತನೂ ಆದ, ಓಂಕಾರವೆಂಬ ನಾಮಧೇಯವುಳ್ಳ, ಸಮಸ್ತ ರಾಕ್ಷಸರೆಂಬ ಕಾಡಿಗೆ ದಾವಾಗ್ನಿಯಂತಿರುವ ವೀರನಾದ ಶ್ರೀರಾಮನನ್ನು ವಂದಿಸುತ್ತೇನೆ.

**ತ್ವಂ ಮೇ ನಾಥೋ ನಾಥಿತಕಾರ್ಯಾಖಿಲಕಾರೀ**
**ಮಾನಾತೀತೋ ಮಾಧವರೂಪೋಽಖಿಲಧಾರೀ ।**
**ಭಕ್ತ್ಯಾ ಗಮ್ಯೋ ಭಾವಿತರೂಪೋ ಭವಹಾರೀ**
**ಯೋಗಾಭ್ಯಾಸೈರ್ಭಾವಿತಚೇತಃ ಸಹಚಾರೀ ॥ ೩ ॥**

ಹೇ ರಾಮ, ನನಗೆ ನೀನೇ ನಾಥನಾಗಿರುವೆ. ನಾನು ಬೇಡಿದ ಎಲ್ಲವನ್ನೂ ನೆರವೇರಿಸುವ, ಅಳತೆಗೆ ಸಿಗದಂತಹ, ಮಾಧವ ರೂಪನಾದ, ಅಖಿಲರೂಪಗಳನ್ನು ಧರಿಸಿರುವ, ಭಕ್ತಿಗೆ ಲಭ್ಯನಾದ, ತನ್ನ ಸ್ವರೂಪವನ್ನು ಧ್ಯಾನಿಸುವವರ ಸಂಸಾರಭಯವನ್ನು ಕಳೆಯುವ ನೀನು ಯೋಗಾಭ್ಯಾಸದಿಂದ ಶುದ್ಧವಾದ ಚಿತ್ತದಲ್ಲಿ ವಿಹರಿಸುವವನಾಗಿರುವೆ.

('ಅಧ್ಯಾತ್ಮ ರಾಮಾಯಣ' ದಿಂದ)

## ಸೂಕ್ತಿಪ್ರಭ

ಧರ್ಮ ಮತ್ತು ಪ್ರಾಯೋಗಿಕ ಜೀವನ ಬೇರೆಯಲ್ಲ. ಸಂನ್ಯಾಸವೆಂದರೆ ಜೀವನದಿಂದ ಓಡಿಹೋಗುವುದಲ್ಲ. ನಿಜವಾದ ಆದರ್ಶವೇ, ನಿಮ್ಮ ಸ್ವಂತಕ್ಕಾಗಿ ನೀವು ದುಡಿಯುವ ಬದಲಾಗಿ ನಿಮ್ಮ ದೇಶ, ಕುಟುಂಬ ಎಲ್ಲವೂ ಒಂದಾಗಿ ದುಡಿಯುವಂತೆ ಮಾಡುವುದು. ಅದಕ್ಕೂ ಹೆಚ್ಚಿನದು ಮಾನವತೆಗಾಗಿ ಸೇವೆ ಸಲ್ಲಿಸುವುದು, ಮುಂದಿನ ಹೆಜ್ಜೆಯೇ ದೇವರ ಸೇವೆ ಮಾಡುವುದು.

— ಬಾಲ ಗಂಗಾಧರ ತಿಲಕ್

ಸತ್ಯವು ನಮ್ಮ ಸೀಮಿತ ಅರಿವಿಗೆ ನಿಲುಕಲಾರದಷ್ಟು ದೊಡ್ಡದು; ಅದನ್ನು ಸಂಪೂರ್ಣ ತಿಳಿಯಲಾಗದು. ಆದರೂ ನಾವು ನಮ್ಮ ಜೀವನವನ್ನು ಅತಿಹೆಚ್ಚಿನ ಸತ್ಯವನ್ನು ಒಳಗೊಂಡ ತತ್ತ್ವವನ್ನಾಧರಿಸಿ ನಿರ್ಮಿಸಬೇಕು. ಪರಮಸತ್ಯವನ್ನು ಅರಿಯಲು ನಮಗೆ ಸಾಧ್ಯವಿಲ್ಲ ಅಥವಾ ನಾವು ಅರಿತಿಲ್ಲ ಎಂಬ ಕಾರಣಕ್ಕಾಗಿ ನಾವು ಕೈಕಟ್ಟಿ ಕುಳಿತುಕೊಳ್ಳಲಾಗದು.

— ಸುಭಾಷ್ ಚಂದ್ರ ಬೋಸ್

ಜಗತ್ತಿಗೆ ನಾನು ಯಾವ ರೀತಿ ಕಾಣಿಸಿಕೊಳ್ಳುತ್ತಿದ್ದೇನೋ ನನಗೆ ಗೊತ್ತಿಲ್ಲ. ಆದರೆ ನನ್ನ ಪಾಲಿಗೆ ನಾನು ಚಿಕ್ಕ ಹುಡುಗನಂತೆ — ಸಮುದ್ರ ತೀರದಲ್ಲಿ ಕುಳಿತು ಆಟವಾಡುತ್ತಿದ್ದೇನೆ. ಅಲ್ಲಿ ಸಾಮಾನ್ಯವಾಗಿ ಸಿಗುವುದಕ್ಕಿಂತ ನಯವಾದ ಕಲ್ಲುಗಳನ್ನು, ಇನ್ನಷ್ಟು ಸುಂದರವಾದ ಚಿಪ್ಪುಗಳನ್ನು ನಾನು ಹುಡುಕುತ್ತಿದ್ದೇನೆ. ಆದರೆ ಸತ್ಯದ ಅನಂತ ಸಾಗರ ನನ್ನ ಮುಂದೆ ಅಜ್ಞಾತವಾಗಿಯೇ ಉಳಿದಿದೆ.

— ಐಸಾಕ್ ನ್ಯೂಟನ್

ತತ್ತ್ವಶಾಸ್ತ್ರವೆಂಬುದನ್ನು ಜಗತ್ತೆಂಬ ಈ ದೊಡ್ಡ ಪುಸ್ತಕದಲ್ಲಿ ಬರೆಯಲಾಗಿದೆ; ಅದು ನೋಡಲು ನಮ್ಮ ಮುಂದೆ ತೆರೆದಿಟ್ಟಿದೆ. ಆದರೆ ಪುಸ್ತಕವನ್ನು ಬರೆದ ಭಾಷೆ ಗೊತ್ತಿಲ್ಲದೆ, ಅದನ್ನು ಬರೆದ ಅಕ್ಷರಗಳನ್ನು ಓದಲು ಕಲಿತಲ್ಲದೆ ನಾವು ಅದನ್ನು ಅರ್ಥಮಾಡಿಕೊಳ್ಳಲಾರೆವು.

—ಗೆಲಿಲಿಯೋ